## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1374 (ಕಂದಾಯ ಇಲಾಖೆಯಿಂದ ವರ್ಗಾಯಿತ) |
| ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19-03-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| 1 | ರಾಜ್ಯದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳ ಟೋಲ್ ಕಂಪನಿಗಳು ರಾಜ್ಯ ಸರ್ಕಾರಕ್ಕೆ ಮುದ್ರಾಂಕ ಶುಲ್ಕವನ್ನು ಪಾವತಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ, ಎಷ್ಟು ವರ್ಷಗಳಿಂದ ಈ ಮುದ್ರಾಂಕ ಶುಲ್ಕವನ್ನು ಪಾವತಿಸದೆ ಇದರ ವಸೂಲಾತಿಗೆ ಇದುವರೆಗೆ ಸರ್ಕಾರದ ಕೈಗೊಂಡ ಕ್ರಮಗಳೇನು; (ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳ ಟೋಲ್ ಕಂಪನಿಗಳು ರಾಜ್ಯ ಸರ್ಕಾರಕ್ಕೆ ಮುದ್ರಾಂಕ ಶುಲ್ಕವನ್ನು ಪಾವತಿಸುವುದಕ್ಕೆ ಸಂಬಂಧಿಸಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಈ ಕೆಳಕಂಡಂತೆ ವರದಿಸಿರುತ್ತಾರೆ.<br><br>ಬಳಕೆದಾರರ ಶುಲ್ಕ ಸಂಗ್ರಹ ಏಜೆನ್ಸಿಗಳೊಂದಿಗಿನ ಒಪ್ಪಂದಗಳು NHAI HQ., ನವದೆಹಲಿಯಲ್ಲಿ ಸಹಿ ಮಾಡಲ್ಪಡುತ್ತವೆ ಮತ್ತು ಒಪ್ಪಂದದ ಪ್ರಕಾರ ಮಹಾ ನಿರ್ದೇಶಕರು, ನೋಂದಣಿ, ನವದೆಹಲಿ ಇವರಿಂದ ಸರಿಯಾದ ಮುದ್ರಾಂಕ ಶುಲ್ಕವನ್ನು ನಿರ್ಣಯಿಸಲಾಗುತ್ತದೆ.<br><br>ಭಾರತೀಯ ಸ್ಟಾಂಪ್ ಡ್ಯೂಟಿ ಆಕ್ಟ್, 1899 ರ ಅಡಿಯಲ್ಲಿ ಪ್ರಾಧಿಕಾರ ಮತ್ತು ರಿಯಾಯಿತಿ ದಾರರ ಮಧ್ಯೆ ಆಗಿರುವ ಒಪ್ಪಂದದ ಅಡಿಯಲ್ಲಿ ಮುದ್ರಾಂಕ ಶುಲ್ಕವನ್ನು ಪಾವತಿಸಬೇಕಾಗುವುದಿಲ್ಲ ಎಂದು ಭಾರತದ ಅಟಾರ್ನಿ ಜನರಲ್ ಅಭಿಪ್ರಾಯಪಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ.<br><br>ಟೋಲ್ ಏಜೆನ್ಸಿಗಳು/ಗುತ್ತಿಗೆದಾರರೊಂದಿಗಿನ ಒಪ್ಪಂದಗಳನ್ನು ದೆಹಲಿಯಲ್ಲಿ ಕಾರ್ಯಗತಗೊಳಿಸುವುದರಿಂದ, ದೆಹಲಿಯಲ್ಲಿ ಮುದ್ರಾಂಕ ಶುಲ್ಕವನ್ನು ಪಾವತಿಸಲಾಗಿರುತ್ತದೆ. ಟೋಲ್ ಏಜೆನ್ಸಿಗಳ ಒಪ್ಪಂದಗಳಿಗೆ ಸಂಬಂಧಿಸಿದಂತೆ, ಏಜೆನ್ಸಿಗಳು ಭಾರತ ಸರ್ಕಾರದ ಪರವಾಗಿ ಟೋಲ್ ಶುಲ್ಕವನ್ನು ಸಂಗ್ರಹಿಸುತ್ತವೆ ಮತ್ತು ಅದನ್ನು ಭಾರತದ ಕ್ರೋಢೀಕೃತ ಠೇವಣಿ ಮಾಡಲಾಗುತ್ತದೆ. ಇದಲ್ಲದೆ, ಭಾರತೀಯ ಸ್ಟ್ಯಾಂಪ್ ಆಕ್ಟ್, 1899 ರ ಪ್ರಕಾರ, NHAI ಗೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ನೀಡಲಾಗಿರುತ್ತದೆ. ಈ ವಿಷಯವನ್ನು ಭಾರತ ಸರ್ಕಾರ/ MoRTH ದೊಂದಿಗೆ ಪರಾಮರ್ಶಿಸಬಹುದು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| 2 | ಕೋಟ್ಯಾಂತರ ರೂಪಾಯಿಗಳ ಮುದ್ರಾಂಕ ಕಟ್ಟದೆ ಇರುವ ಟೋಲ್ ಕಂಪನಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇನು; ಯಾವ ಕಾಲಮಿತಿಯಲ್ಲಿ ಶುಲ್ಕ ವಸೂಲಾತಿ ಮಾಡಲಾಗುವುದು; (ಮಾಹಿತಿ ಒದಗಿಸುವುದು) | |
| 3 | ನಿಗಧಿತ ಸಮಯದಲ್ಲಿ ಈ ಮುದ್ರಾಂಕ ಶುಲ್ಕವನ್ನು ಕಟ್ಟದಿರುವ ಟೋಲ್‌ಗಳನ್ನು ಮುಚ್ಚಲು ಸರ್ಕಾರದ ನಿರ್ಧಾರಗಳೇನು? (ಮಾಹಿತಿ ಒದಗಿಸುವುದು) | |

ಕಡತ ಸಂಖ್ಯೆ: ಲೋಇ 129 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು